ನೀಡಿದ ಕೆಲಸಗಳನ್ನು ಮುಗಿಸುವುದರಲ್ಲಿ ಕಳೆಯುತ್ತಿತ್ತು. ಈಗ ಪ್ರತಿಯೊಂದು ಕಾಯಿಲೆ, ರೋಗಿ, ರೋಗದ ಉಲ್ಬಣ ಸ್ಥಿತಿ, ಚಿಕಿತ್ಸೆಯ ಪರಿಣಾಮ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಲು ಅವಕಾಶವಿತ್ತು. ಬಹಳಷ್ಟು ಆಸಕ್ತಿಯಿಂದ ಕೆಲಸ ಮಾಡುತ್ತಾ ಓದುತ್ತಾ ಖುಷಿಯಿಂದಲೇ ಕರ್ತವ್ಯ ಸಾಗತೊಡಗಿತ್ತು.

ಐಸಿಯುನ ಒಳಗೆ ವೈದ್ಯಕೀಯ ಸಿಬ್ಬಂದಿ ಹೊರತುಪಡಿಸಿ ಅನ್ಯರಿಗೆ ಪ್ರವೇಶವಿರುವುದಿಲ್ಲ. ಮಗುವಿನ ಆರೋಗ್ಯ ಸ್ಥಿತಿಯ ಬಗ್ಗೆ ಪ್ರತಿದಿನ ಮಧ್ಯಾಹ್ನ ಪೋಷಕರಿಗೆ ತಿಳಿಸಲಾಗುತ್ತದೆ ಹಾಗೂ ಪ್ರತಿದಿನ ಸಂಜೆ ಇಬ್ಬರು ಸಂಬಂಧಿಕರು ಅಥವಾ ಪೋಷಕರಿಗೆ ಐಸಿಯುನ ಗಾಜಿನ ಕಿಟಕಿಯಿಂದ ಮಗುವನ್ನು ದೂರದಿಂದಲೇ ತೋರಿಸಲಾಗುತ್ತದೆ.

ಎನ್‌ಐಸಿಯುನಲ್ಲಿ ತಾಯಂದಿರಿಗೆ ವಿಶೇಷ ಆದ್ಯತೆ. ಹೆರಿಗೆಯ ನಂತರ ತಾಯಿ ನಡೆದಾಡುವಂತೆ ಆದಕೂಡಲೇ ಆಕೆಯನ್ನು ಎನ್‌ಐಸಿಯುಗೆ ಕರೆಸಿಕೊಳ್ಳಲಾಗುತ್ತದೆ. ತಾಯಿಯ ಒಡನಾಟ ಮಗುವಿನ ಆರೋಗ್ಯದಲ್ಲಿ ಪವಾಡವನ್ನೇ ಸೃಷ್ಟಿಸಿದ್ದನ್ನು ನಾನು ಕಂಡಿದ್ದೇನೆ. ಹಾಗಾಗಿ ತನ್ನ ಮಗುವನ್ನು ನೋಡಲು ತಾಯಿಗೆ ಯಾವುದೇ ನಿರ್ಬಂಧಗಳಿರುವುದಿಲ್ಲ. (ಪ್ರತಿ ಆಸ್ಪತ್ರೆಗೂ ಅದರದ್ದೇ ಆದಂತಹ ಕಾರ್ಯನೀತಿಗಳು ಇರುತ್ತವೆ).

ಬಿರುಗಾಳಿಯಂತೆ ಅಬ್ಬರಿಸಿದ ಕೊರೊನಾ ಎಲ್ಲ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿತ್ತು. ಅಕಸ್ಮಾತ್ ಐಸಿಯುನ ಒಳಗೆ ಕೊರೊನಾ ನುಸುಳಿದರೆ ಅದೊಂದು ದುಃಸ್ವಪ್ನವೇ ಸರಿ. ಆ ಸಾಧ್ಯತೆಯನ್ನು ನಿಯಂತ್ರಿಸಲು ಐಸಿಯು ಪ್ರವೇಶಕ್ಕೆ ಬಹಳಷ್ಟು ನಿರ್ಬಂಧ ಹೇರಲಾಯಿತು. ವೈದ್ಯಕೀಯ ಸಿಬ್ಬಂದಿಯನ್ನು ಹೊರತುಪಡಿಸಿ ಬೇರೆಲ್ಲರಿಗೂ ಪ್ರವೇಶ ಸಂಪೂರ್ಣ ನಿಷಿದ್ಧವಾಯಿತು. ಮಗುವಿನ ಸ್ಥಿತಿ ಗತಿಗಳ ಬಗ್ಗೆ ದೂರವಾಣಿಯಿಂದಲೇ ತಿಳಿಸಲಾಗುತ್ತಿತ್ತು. ಹೊಸ ನಿರ್ಬಂಧಗಳು ಐಸಿಯುನಲ್ಲಿನ ನಮ್ಮ ಕಾರ್ಯಕ್ಷಮತೆಯ ಮೇಲೆ ಬಹಳ ಪ್ರಭಾವ ಬೀರುತ್ತಿತ್ತು. ಬೇರೆ ದಾರಿಯಿಲ್ಲದೆ ಎಲ್ಲದಕ್ಕೂ ಹೊಂದಿಕೊಂಡು ಕಾರ್ಯನಿರ್ವಹಿಸುತ್ತಿದ್ದೆವು.

ಮೇ 10 'ವಿಶ್ವ ತಾಯಂದಿರ ದಿನ'ದ ಸಂದರ್ಭ. ಸಾಮಾಜಿಕ ಜಾಲತಾಣಗಳಲ್ಲಿ ಅಮ್ಮಂದಿರಿಗೆ ಶುಭಾಶಯಗಳ ಸುರಿಮಳೆಯಾಗುತ್ತಿತ್ತು. ಎಲ್ಲರೂ ತಮ್ಮ ತಾಯಿಯ ಜೊತೆಗಿನ ಫೋಟೊ ಹಾಕಿ ಸಂಭ್ರಮಿಸುತ್ತಿದ್ದರು. ಹಿಂದಿನ ದಿನವಷ್ಟೇ 24 ಗಂಟೆ ಪಾಳಿಯ ಕರ್ತವ್ಯ ನಿರ್ವಹಿಸಿ ಎಲ್ಲಾ ಕೆಲಸಗಳನ್ನು ಮುಗಿಸಿ, ಮುಂದಿನ ಪಾಳಿಯವರಿಗಾಗಿ ಕಾಯುತ್ತಿದೆ. ಬೆಳಿಗ್ಗೆ ಸುಮಾರು 8.30ರ ಸುಮಾರಿಗೆ ಸಿಸ್ಟರ್ ಬಂದು ಕರೆದರು. 'ಒಂದು ಮಗುವಿನ ಪೋಷಕರು ಹೊರಗಡೆ ಕಾಯುತ್ತಿದ್ದಾರೆ. ಮಗುವಿನ ಆರೋಗ್ಯ ಸ್ಥಿತಿಯ ಬಗ್ಗೆ ವಿಚಾರಿಸಬೇಕಂತೆ' ಎಂದರು. ಹೊಸ ನಿಯಮದ ಪ್ರಕಾರ ಐಸಿಯು ಸಿಬ್ಬಂದಿ ಯಾರೊಂದಿಗೂ ನೇರ ಸಂಪರ್ಕ ಹೊಂದುವಂತಿಲ್ಲ. ಯಾರಿಗೂ ಒಳಬರಲು ಅನುಮತಿಯೂ ಇಲ್ಲ. ದೂರವಾಣಿಯೊಂದೇ ಸಂವಹನದ ಮಾಧ್ಯಮ. ಆದರೆ ಸಿಸ್ಟರ್ ಹೇಳಿದ ಮಾತು ನನಗೆ ಅರ್ಥವಾಯಿತು. ಪೋಷಕರು ಕರ್ತವ್ಯದಲ್ಲಿನ ವೈದ್ಯರ ಜೊತೆಗೆ ಮಾತನಾಡಬೇಕೆಂದು ಪಟ್ಟು ಹಿಡಿದಿದ್ದರು.

ಐಸಿಯು ಹೊರಗೆ ಬಂದು ಕಾರಿಡಾರ್‌ನಲ್ಲಿ ದೃಷ್ಟಿ ಹಾಯಿಸಿದೆ. ತಕ್ಷಣಕ್ಕೆ ಯಾರು ಕಾಣಿಸಲಿಲ್ಲ. ನಂತರ ಟೇಬಲ್ಲಿನ ಹಿಂಭಾಗ ಒಬ್ಬ ಹೆಣ್ಣುಮಗಳು ಕುಳಿತಿರುವುದು ಕಂಡಿತು. ಏನು ವಿಷಯವೆಂದು ಆಕೆಯನ್ನು ದೂರದಿಂದಲೇ ಕೇಳಿದೆ. ಆಕೆ, 'ಡಾಕ್ಟರ್ ಸಾಬ್, ಮೊನ್ನೆ ನನ್ನ ಡೆಲಿವರಿ ಆಯ್ತು. ಮಗು ಐಸಿಯುನಲ್ಲಿ ಇದೆ, ಮಗು ಬಗ್ಗೆ ವಿಚಾರಿಸಬೇಕಿತ್ತು' ಎಂದಳು. ತನ್ನ ಕಂದನನ್ನು ನೋಡಲು ಐದನೇ ಮಹಡಿಯಿಂದ ನಡೆದು ಬಂದಿದ್ದ ತಾಯಿಗೆ ಒಳ್ಳೆ ಎನ್ನಲು ಮನಸ್ಸಾಗಲಿಲ್ಲ. ಮಗುವನ್ನು ಬೇರೊಬ್ಬ ವೈದ್ಯರು ನೋಡುತ್ತಿದ್ದರು ಹಾಗೂ ಆ ಸಮಯದಲ್ಲಿ ಅವರು ಅಲ್ಲಿ ಲಭ್ಯವಿರಲಿಲ್ಲ. ಹಾಗಾಗಿ ನಾನೇ ಮಗುವಿನ ವಿವರಗಳನ್ನು ಕೇಳಿ ಫೈಲ್ ತರಲು ಒಳಗೆ ಹೋದೆ.

ನವಜಾತ ಶಿಶುಗಳ ದೇಹದ ಉಷ್ಣಾಂಶವನ್ನು ಕಾಪಾಡಲು 'ವಾರ್ಮರ್' ಎಂಬ ವಿಶೇಷ ಸಾಧನದಲ್ಲಿ ಇರಿಸಲಾಗುತ್ತದೆ. ಆಕೆ ಹೇಳಿದ ವಿವರಗಳನ್ನು ಹುಡುಕುತ್ತ ಹೊರಟೆ. ಕೊನೆಗೆ ಕೊಠಡಿಯ ಕೊನೆಯ ಭಾಗದಲ್ಲಿ ಆಕೆ ನೀಡಿದ್ದ ವಿವರಗಳನ್ನು ಅಂಟಿಸಿದ್ದ ಹಾಸಿಗೆ ಕಂಡಿತು. ವಾರ್ಮರ್‌ನ ಒಂದು ಮೂಲೆಯಲ್ಲಿ ಗುಬ್ಬಿಮರಿಯಂತೆ ಪುಟ್ಟ ಮಗುವೊಂದು ಮಲಗಿತ್ತು. ಮೂಗಿಗೆ ಒತ್ತಡದ ಆಮ್ಲಜನಕದ ನಳಿಕೆಗಳನ್ನು ಅಳವಡಿಸಲಾಗಿತ್ತು. ಆಗೊಮ್ಮೆ ಈಗೊಮ್ಮೆ ತನ್ನ ನಾಜೂಕಾದ ಕೈಕಾಲುಗಳನ್ನು ಅಲುಗಾಡಿಸಿ ತನ್ನ ಇರುವಿಕೆಯನ್ನು ದೃಢಪಡಿಸುತ್ತಿತ್ತು. ಸುಮಾರು ಏಳು ತಿಂಗಳಿಗೆ ಹೆರಿಗೆಯಾದ, ಅವಧಿಪೂರ್ವ ಜನಿಸಿದ ಆ ಹಸುಳೆಯ ತೂಕ ಒಂದು ಕೆ.ಜಿ.ಯಷ್ಟೇ ಇತ್ತು. ಮಗುವಿಗೆ ಉಸಿರಾಟದ ತೊಂದರೆ, ಉಷ್ಣಾಂಶದ ಏರುಪೇರು, ಸೋಂಕು ಹಾಗೂ ಮತ್ತಷ್ಟು ತೊಂದರೆಗಳು ಇದ್ದವು. ಮಗುವಿನ ಸ್ಥಿತಿ ತುಸು ಚಿಂತಾಜನಕವಾಗಿತ್ತು. ಇವೆಲ್ಲವನ್ನು ಅವಲೋಕಿಸುತ್ತಾ ಫೈಲ್ ಜೊತೆಗೆ ಹೊರನಡೆದೆ. ಮಗುವಿನ ಆರೋಗ್ಯ ಸ್ಥಿತಿಯನ್ನು ಆ ತಾಯಿಯ ಮಾನಸಿಕ ಸ್ಥೈರ್ಯಕ್ಕನುಸಾರವಾಗಿ ವಿವರಿಸಿದೆ. ಮಗುವಿನ ಪರಿಸ್ಥಿತಿ ಆಕೆಗೆ ಅರ್ಥವಾಯಿತು.

'ಹುಟ್ಟಿದಾಗಿನಿಂದ ನಾನು ಮಗುವನ್ನು ನೋಡಿಯೇ ಇಲ್ಲ, ಒಂದು ಬಾರಿ ನನ್ನ ಮಗುವನ್ನು ನೋಡಬಹುದೇ' ಎಂದು ವಿನಂತಿಸಿದಳು. ಪರಿಸ್ಥಿತಿಯ ಕೈಗೊಂಬೆಯಾಗಿದ್ದು ನಾನು ಸೌಮ್ಯವಾಗಿಯೇ 'ಹೊಸ ನಿಯಮದ ಪ್ರಕಾರ ಯಾರನ್ನೂ ಒಳಬಿಡುವಂತಿಲ್ಲ' ಎನ್ನುತ್ತಿದ್ದಂತೆ ಆಕೆಯ ಕಣ್ಣುಗಳಲ್ಲಿ ಕಣ್ಣೀರು ಹರಿಯಲು ಶುರುವಾಯಿತು. ಸಮಾಧಾನಪಡಿಸಲು ಪ್ರಯತ್ನಿಸಿದೆ. ಆದರೆ ಆಕೆಯ ನೋವನ್ನು ಸಂತೈಸಲು ಆಗಲಿಲ್ಲ.

'ಇದು ನಾನು ಹೊತ್ತು ಹೆತ್ತ ಮಗು. ನನ್ನ ಮಗುವನ್ನು ನೋಡಲು ನನ್ನನ್ನೇಕೆ ಬಿಡುವುದಿಲ್ಲ' ಎಂಬ ಅವಳ ಮನಸ್ಸಿನ ಮಾತುಗಳನ್ನು ಅವಳ ಕಣ್ಣಾಲಿಯಲ್ಲಿದ್ದ ನೋವಿನ ಹನಿಗಳು ಸಾರಿ ಹೇಳುತ್ತಿದ್ದವು. ಒಂದೂ ಮಾತನಾಡದೆ ಕಣ್ಣೀರಿಡುತ್ತಾ ತನ್ನನ್ನು ತಾನೇ ಸಂತೈಸಿಕೊಂಡು, ತನ್ನ ಕೈಯಲ್ಲಿದ್ದ ಸಣ್ಣ ಮೊಬೈಲ್ ಫೋನ್ ತೋರಿಸುತ್ತಾ ಅಳುಧ್ವನಿಯಲ್ಲಿ, 'ಒಂದು ಫೋಟೊ ತೆಗೆದುಕೊಡುತ್ತೀರಾ ಕಡೆಯಪಕ್ಷ ಮಗುವಿನ ಮುಖವನ್ನಾದರೂ ನೋಡಿಕೊಳ್ಳುತ್ತೇನೆ' ಎಂದಳು. ಮತ್ತದೇ ಕೊರೊನಾ ಕಟ್ಟುಪಾಡು ಕಣ್ಣಮುಂದೆ ಬಂದಿತು. ಗಟ್ಟಿ ಮನಸ್ಸು ಮಾಡಿ, 'ಅದು ಸಾಧ್ಯವಿಲ್ಲ ತಾಯಿ' ಎಂದೆ.

ಮೊದಲೇ ನೊಂದಿದ್ದ ಮಾತೃಹೃದಯ ಚೂರಾದಂತಾಯಿತು. ಒಮ್ಮೆಲೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಧಾರಾಕಾರವಾಗಿ ಸುನಾಮಿಯಂತೆ ಅಪ್ಪಳಿಸುತ್ತಿದ್ದ ಆಕೆಯ ಕಣ್ಣೀರು ನನ್ನ ಮನಸ್ಸನ್ನು ಕಲಕಿತು. ತಾಯಂದಿರ ದಿನದಂದು ಇಂತಹದೊಂದು ದೃಶ್ಯವನ್ನು ನಾನು ನಿರೀಕ್ಷಿಸಿರಲಿಲ್ಲ. ಆ ತಾಯಿಯ ನೋವನ್ನು ಕಂಡು ಮನಸ್ಸು ದಿಗ್ಭ್ರಾಂತವಾಯಿತು. ಬಹಳಷ್ಟು ಸಾವುನೋವುಗಳನ್ನು ಕಂಡು ಗಟ್ಟಿಯಾಗಿದ್ದ ಈ ಹೃದಯ ಇಂದೇಕೋ ಕರಗಿ ನೀರಾದಂತಾಯಿತು. ಕಣ್ಣಮುಂದೆಯೇ ಇಷ್ಟೆಲ್ಲಾ ನಡೆದರೂ ಏನನ್ನೂ ಮಾಡಲಾಗದ ಅಸಹಾಯಕ ಸ್ಥಿತಿ.

ಎಲ್ಲವೂ ಸಹಜ ಸ್ಥಿತಿಯಲ್ಲಿದ್ದರೆ ಆಕೆಯನ್ನು ಪ್ರೋತ್ಸಾಹಿಸಿ ಮಗುವನ್ನು ಎತ್ತಿ ಮುದ್ದಾಡುವ ಅವಕಾಶ ನೀಡುತ್ತಿದ್ದೆವು. ಆದರೆ ಇಂದು ಆ ತಾಯಿಗೆ ತನ್ನ ಮಗುವಿನ ಮುಖವನ್ನೂ ನೋಡಲಾಗಲಿಲ್ಲ. ಕೊರೊನಾದಿಂದ ಆಗಿರುವ ಸಾವುನೋವು, ನಷ್ಟಗಳು ಒಂದೆಡೆಯಾದರೆ ಈ ಮಹಾಮಾರಿಯಿಂದ ಪರೋಕ್ಷವಾಗಿ ಆಗುತ್ತಿರುವ ಇಂತಹ ಕರುಣಾಜನಕ ಸ್ಥಿತಿಗಳು ಇನ್ನೂ ಘೋರ.

ಈ ಎಲ್ಲ ಕಷ್ಟಗಳನ್ನು ಸಹಿಸುವ ಶಕ್ತಿಯನ್ನು ಆ ತಾಯಿಗೆ ಹಾಗೂ ಎಲ್ಲಾ ತೊಂದರೆಗಳನ್ನು ಮೀರಿ ಆರೋಗ್ಯವಂತನಾಗುವ ಸ್ಥೈರ್ಯವನ್ನು ಆ ಕಂದಮ್ಮನಿಗೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸಿದೆ. ಆ ಮಗುವನ್ನು ತಾಯಿಯ ಮಡಿಲಿಗೆ ಸುರಕ್ಷಿತವಾಗಿ ಸೇರಿಸುವ ಎಲ್ಲ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಹಾಗೆ ನಡೆದರೆ ತಾಯಂದಿರ ದಿನದ ಬಹುದೊಡ್ಡ ಉಡುಗೊರೆ ಆ ತಾಯಿಗೆ ಸಿಕ್ಕಂತೆಯೇ ಸರಿ.

> 'ಹುಟ್ಟಿದಾಗಿನಿಂದ ನಾನು ಮಗುವನ್ನು ನೋಡಿಯೇ ಇಲ್ಲ, ಈ ಸಣ್ಣ ಮೊಬೈಲ್‌ನಲ್ಲಿ ಒಂದು ಫೋಟೊ ತೆಗೆದುಕೊಡುತ್ತೀರಾ ಕಡೆಯಪಕ್ಷ ಮಗುವಿನ ಮುಖವನ್ನಾದರೂ ನೋಡಿಕೊಳ್ಳುತ್ತೇನೆ'